TC-041

017/DD/22

| Register Number | | | | | | | | | |
|---|---|---|---|---|---|---|---|---|---|

# DEPARTMENTAL EXAMINATIONS

## TRANSLATION TEST – SECOND PAPER – TRANSLATION OF NEWS PAPER REPORT IN KANNADA TO ENGLISH

(Without Books)

Maximum Time : 2.30 hours Maximum Marks : 100

Answer ALL questions.

1. Translate into English : (1 × 80 = 80)

ಅರಣ್ಯಗಳ ಅರ್ಥ ಮತ್ತು ಪ್ರಾಮುಖ್ಯತೆ

ವೃಕ್ಷ ಮತ್ತು ಇತರ ಸಸ್ಯಸಂಕುಲಗಳಿಂದ ಆವರಿಸಿದ ವಿಶಾಲ ಭೂಭಾಗವನ್ನು 'ಅರಣ್ಯ' ಎಂದು ಕರೆಯಲಾಗಿದೆ. ಇದು ಸಾಮಾನ್ಯವಾಗಿ ಬೆಲೆಬಾಳುವ ವೃಕ್ಷ ಪ್ರಧಾನ ಪ್ರದೇಶ. ಅರಣ್ಯಗಳು ನೈಸರ್ಗಿಕ ಅಥವಾ ಮಾನವ ಪೋಷಿತ ನೆಡು ತೋಪುಗಳಾಗಿರಬಹುದು.

ಅರಣ್ಯಗಳು ಭಾರತದ ನೈಸರ್ಗಿಕ ಸಂಪನ್ಮೂಲಗಳಲ್ಲಿ ಒಂದಾಗಿವೆ. ಅವು ಪ್ರತ್ಯಕ್ಷವಾಗಿ ಮರದ ವಸ್ತುಗಳನ್ನು ಪೂರೈಸುತ್ತವೆ. ಅವು ಸೌದೆ, ಚೌಬೀನೆ ಮತ್ತು ಕೈಗಾರಿಕಾ ಕಚ್ಚಾಪದಾರ್ಥಗಳಾಗಿ ಬಳಕೆಯಾಗುವವು. ಅರಣ್ಯಗಳು ಜಾನುವಾರುಗಳಿಗೆ ಬೇಕಾದ ಮೇವು ಮತ್ತು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.

ಅರಣ್ಯಗಳು ಪರೋಕ್ಷವಾಗಿ ಮೇಲ್ಮೈ ಲಕ್ಷಣಗಳನ್ನು ಸಂರಕ್ಷಿಸುತ್ತವೆ, ಹರಿಯುವ ನೀರಿನ ರಭಸವನ್ನು ಮಿತಗೊಳಿಸಿ, ಪ್ರವಾಹ ಮತ್ತು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತವೆ. ಮರುಭೂಮೀಕರಣವನ್ನು ತಡೆಯುತ್ತವೆ. ಮಣ್ಣಿನ ಫಲವತ್ತತೆಯ ವೃದ್ಧಿಗೆ ನೆರವಾಗುತ್ತವೆ. ವಾಯುಗುಣವನ್ನು ಸಮತೋಲನಗೊಳಿಸಲು ಮತ್ತು ಪರಿಯಾವರಣ (ಎಕಾಲಾಜಿಕಲ್) ಸಮತೋಲನವನ್ನು ಕಾಪಾಡಲು ನೆರವಾಗುತ್ತವೆ. ಅವು ವನ್ಯ ಜೀವಿಗಳಿಗೆ ಆಶ್ರಯ ನೀಡುತ್ತವೆ.

ಭಾರತದಲ್ಲಿ ಅರಣ್ಯಗಳ ವಿಧಗಳನ್ನು ನಿರ್ಧರಿಸುವ ಅಂಶಗಳೆಂದರೆ; ವಾಯುಗುಣ, ಮಣ್ಣು ಮತ್ತು ಮೇಲ್ಮೈ ಲಕ್ಷಣಗಳು. ಇವುಗಳಲ್ಲಿ ವಾಯುಗುಣ ಅತಿ ಪ್ರಮುಖವಾದ ಅಂಶ. ವಿಶಾಲವಾದ ಭಾರತದಲ್ಲಿ ಅನೇಕ ವಿಧದ ಅರಣ್ಯಗಳಿವೆ.

[Turn over

2. ಈ ಕೆಳಕಂಡ ಗಾದೆಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸಿರಿ. (10 × 2 = 20)

(a) ಆಸೆಯೇ ದುಃಖಕ್ಕೆ ಮೂಲ ಕಾರಣ.

(b) ಕೈ ಕೆಸರಾದರೆ ಬಾಯಿ ಮೊಸರು.

(c) ಆರೋಗ್ಯವೇ ಭಾಗ್ಯ.

(d) ಬೊಗಳುವ ನಾಯಿ ಕಚ್ಚುವುದಿಲ್ಲ.

(e) ಕಾಯಕವೇ ಕೈಲಾಸ.

(f) ಹಾಸಿಗೆ ಇದ್ದಷ್ಟು ಕಾಲು ಚಾಚು.

(g) ನಿಧಾನವೇ ಪ್ರಧಾನ.

(h) ಮನಸ್ಸಿದ್ದರೆ ಮಾರ್ಗ.

(i) ಮಾಡಿದುಣ್ಣೋ ಮಹಾರಾಯ.

(j) ಅತಿಯಾಸೆ ಗತಿಗೇಡು.